ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

ಸಂಖ್ಯೆ : ಗ್ರಾಅಪ/ರಾನೀನೈಮಿ/ಎನ್‌ಬಿಎ/CEO-14/2013-14/312 ದಿನಾಂಕ :17.09.2013

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತಿಗಳು,
ಮಾನ್ಯರೆ,

***ವಿಷಯ:*** ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿ ವೈಯಕ್ತಿಕ ಶೌಚಾಲಯು ನಿರ್ಮಿಸಲು ಕಡ್ಡಾಯವಾಗಿ ಅನುಸರಿಸ ಬೇಕಾದ ಕಾರ್ಯಸೂಚಿ(Flow Chart) ಕುರಿತು.

***ಉಲ್ಲೇಖ*** 1.ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/ರಾನೀನೈಮಿ/ನಿಭಾಅ/36/2013-14 ದಿನಾಂಕ 01.08.2013
2. ಈಕಛೇರಿಪತ್ರಸಂಖ್ಯೆ:ಗ್ರಾಅಪ/ರಾನೀನೈಮಿ/ಎನ್‌ಬಿಎ/ಸುತ್ತೋಲೆ-22/2013-14 ದಿನಾಂಕ.10.07.2013.

........................

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದ ಪರಿಷ್ಕೃತ ಮಾರ್ಗಸ್ರಚಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದ್ದು, ಇದರಲ್ಲಿ ಪ್ರಕಾರ ವೈಯಕ್ತಿಕ ಶೌಚಾಲಯು ನಿರ್ಮಿಸಲು ರೂ. 4700/- ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ರೂ.4500/-ಗಳ ಅನುದಾನ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ,

ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಕಛೇರಿ ಸಿಬ್ಬಂದಿ ಹಲವು ಗ್ರಾಮ ಪಂಚಾಯಿತಿಗಳಿಗೆ ಬೇಟಿ ನೀಡಿದ ಸಂಬಂಧರ್ಬದಲ್ಲಿ, ವೈಯಕ್ತಿಕ ಶೌಚಾಲಯಕ್ಕೆ ಫಲಾನುಭವಿಗಳ ಆಯ್ಕೆ, ನಿರ್ಮಾಣ ಹಾಗೂ ನಿರ್ವಹಿಸಬೇಕಾದ ದಾಖಲಾತಿಗಳ ಕುರಿತು ಪಿಡಿಓ ರವರಲ್ಲಿ ಸೂಕ್ತ ಮಾಹಿತಿ ಇಲ್ಲದಿರುವುದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಫಲಾನುಭವಿಗಳಿಗೆ ಅರ್ಜಿ ವಿತರಿಸುವ, ಸ್ವೀಕರಿಸುವ, ಪರಿಶೀಲಿಸುವ ಹಾಗೂ ಕಾಮಗಾರಿ ಆದೇಶ ಮತ್ತು ಪ್ರೋತ್ಸಾಹಧನ ಮಂಜೂರು ಮಾಡುವ ವಿಧಾನಗಳ ಬಗ್ಗೆ ಉಲ್ಲೇಖ 2ರಲ್ಲಿ ಈಗಾಗಲೇ ನಮೂನೆಗಳನ್ನು ಸಿದ್ದಪಡಿಸಿ ನೀಡಲಾಗಿದೆ.

ಈ ಪತ್ರದೊಂದಿಗೆ ವೈಯಕ್ತಿಕ ಶೌಚಾಲಯ ನಿರ್ಮಿಲು ಕಡ್ಡಾಯವಾಗಿ ಅನುಸರಿಸ ಬೇಕಾದ ಕಾರ್ಯಸೂಚಿ(Flow Chart) ಈ ಪತ್ರದೊಂದಿಗೆ ಲಗತ್ತಿಸಿದ್ದು, ಅದರಂತೆ ಕಾರ್ಯನಿರ್ವಹಿಸಲು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಆದೇಶ ನೀಡಲು ಸೂಚಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿವಹಿಸಿ, ಕೆಳಕಂಡ ಮಾಹಿತಿಗಳನ್ನು ಸದರಿ ಇಲಾಖೆಗಳಿಂದ ಪಡೆದು ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ದಿನಾಂಕ 28.09.2013ರೊಳಗೆ ಒದಗಿಸುವುದು.

1. ಬಿಪಿಎಲ್ ಇತರೆ – ಬಿಪಿಎಲ್ ಸಮೀಕ್ಷೆ ಪಟ್ಟಿಯಂತೆ / ಕುಟುಂಬ ಪಡಿತರ ಚೀಟಿಯಲ್ಲಿ ನಮೂದಿಸಿರುವಂತೆ/ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆರವರ ದೃಡೀಕೃತ ಪಟ್ಟಿ.
2. ಸಣ್ಣ ಮತ್ತು ಅತಿಸಣ್ಣ ರೈತರು, ಕೃಷಿ ಇಲಾಖೆ/ಕಂದಾಯ ಇಲಾಖೆಯ ದೃಡೀಕೃತ ಪಟ್ಟಿ.

ತಮ್ಮ ವಿಶ್ವಾಸಿ

ಮಿಷನ್ ನಿರ್ದೇಶಕರು,
ರಾ.ನೀ.ನೈ.ಮಿಷನ್ ಹಾಗೂ ಸರ್ಕಾರದ
ಪದನಿಮಿತ್ತ ಅಪರ ಕಾರ್ಯದರ್ಶಿಗಳು,
ಗ್ರಾ. ಅ ಮತ್ತು ಪಂಚಾಯತ್ ರಾಜ್ ಇಲಾಖೆ.

ಪು ತಿ ನೋ ..1

<u>ಪ್ರತಿಯನ್ನು:</u>

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.
2. ಕಾರ್ಯದರ್ಶಿಗಳು (ಪಂ.ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.

---

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861 : - ಫ್ಯಾಕ್ಸ್ :-22221862 E-mail : wsrdpr@gmail.com

# ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಧನ ಪಡೆಯುವ ವಿಧಾನ

**ಫಲಾನುಭವಿಗಳು**
(ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸುವುದು)

↓

ಗ್ರಾಮ ಸಭೆ ಅನುಮೋದಿತ ಬೇಸ್‌ಲೈನ್ ಸರ್ವೆ -2012ರ ಪಟ್ಟಿಯನ್ನು ಪರಿಶೀಲಿಸಿ
1)**ಕುಟುಂಬ ಶೌಚಾಲಯ ಹೊಂದಿಲ್ಲವೆಂದು** ನಮೂದಿಸಿದ್ದಲ್ಲಿ ಮಾತ್ರ. ಹಾಗೂ
2)ಹಿಂದಿನ ಸಾಲುಗಳಲ್ಲಿ ಯಾವುದೇ ಯೋಜನೆಯಡಿ ಅರ್ಜಿದಾರರು/ ಅವರ ಕುಟುಂಬದವರು ಶೌಚಾಲಯಕ್ಕಾಗಿ ಪ್ರೋತ್ಸಾಹಧನ ಪಡೆದಿಲ್ಲವೆಂದು ದೃಢಪಟ್ಟಿದ್ದಲ್ಲಿ.

↓

**ಫಲಾನುಭವಿ ಅರ್ಹತೆ – ಪರಿಶೀಲನೆ**

**ಬಿಪಿಎಲ್:**

ಬಿಪಿಎಲ್/ಎಪಿಎಲ್ (ಎಸ್‌ಸಿ/ಎಸ್‌ಟಿ) – ಜಾತಿ ಪ್ರಮಾಣ ಪತ್ರ ದಾಖಲೆಯಂತೆ
ಬಿಪಿಎಲ್ ಇತರೆ – ಬಿಪಿಎಲ್ ಸಮೀಕ್ಷೆ ಪಟ್ಟಿಯಂತೆ / ಕುಟುಂಬ ಪಡಿತರ ಚೀಟಿಯಲ್ಲಿ ನಮೂದಿಸಿರುವಂತೆ/ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆರವರ ದೃಢೀಕೃತ ಪಟ್ಟಿಯಂತೆ

**ಎಪಿಎಲ್:**

ಸಣ್ಣ ಮತ್ತು ಅತಿಸಣ್ಣ ರೈತರು – ಕೃಷಿ ಇಲಾಖೆ/ ಕಂದಾಯ ಇಲಾಖೆಯ ದೃಢೀಕೃತ ಪಟ್ಟಿಯಂತೆ.
ಭೂರಹಿತ ಕೃಷಿ ಕಾರ್ಮಿಕರು – ಕಂದಾಯ ಇಲಾಖೆಯ ದೃಢೀಕರಣದಂತೆ
ಅಂಗವಿಕಲರಿಗೆ – ಕಂದಾಯ ಇಲಾಖೆಯ ಪಿಂಚಣಿ ದಾಖಲೆ / ವೈದ್ಯಕೀಯ ಪ್ರಮಾಣ ಪತ್ರ
ಮಹಿಳಾ ಪ್ರಧಾನ ಕುಟುಂಬಗಳು – ವಿಧವೆ ಪಿಂಚಣಿ ದಾಖಲೆ/ಪಿಡಿಒ ದೃಢೀಕರಣ

↓

**ಪಂ.ಅ.ಅ. ಯವರಿಂದ ಸ್ಥಳ ಪರಿಶೀಲನೆ**
(ಅರ್ಜಿ ಸ್ವೀಕರಿಸಿದ 3 ದಿನಗಳ ಒಳಗೆ)

→ ಸ್ಥಳ ಲಭ್ಯವಿದ್ದಲ್ಲಿ

→ **ಪಂ.ಅ.ಅ. ಯವರಿಂದ ಮಂಜೂರಾತಿ ಆದೇಶ**
(ಸ್ಥಳ ಪರಿಶೀಲನೆಯಾದ ನಂತರ 1 ದಿನದ ಒಳಗೆ)

← ಎಂ.ಎನ್.ಆರ್.ಇ.ಜಿ.ಎ. ಅಡಿಯಲ್ಲಿ ಮಸ್ಟರ್ ರೋಲ್ ಸೃಷ್ಟಿಸುವುದು → MNREGA ಮಾರ್ಗಸೂಚಿಯಂತೆ

↓

**ಫಲಾನುಭವಿಗಳಿಂದ ಶೌಚಾಲಯ ನಿರ್ಮಾಣ**
(45 ದಿನಗಳ ಒಳಗೆ)

↓

**ಶೌಚಾಲಯ ನಿರ್ಮಾಣ ಮುಕ್ತಾಯ**

↓

**ಪಂ.ಅ.ಅ. ಯವರಿಂದ ಕಾಮಗಾರಿ ಪರಿಶೀಲನೆ**

↓

**ಪಂ.ಅ.ಅ. ಯವರಿಂದ ಪ್ರೋತ್ಸಾಹಧನ ಮಂಜೂರಾತಿ**
(1 ದಿನದ ಒಳಗೆ)

↓

**ಫಲಾನುಭವಿಗಳ ಖಾತೆಗೆ ನೇರ ಜಮೆ**

| ಎಂ.ಎನ್.ಆರ್.ಇ.ಜಿ.ಎ. ವತಿಯಿಂದ | ಫಲಾನುಭವಿಗಳು ಭರಿಸುವುದು | ನಿರ್ಮಲ ಭಾರತ ಅಭಿಯಾನ ವತಿಯಿಂದ |
|---|---|---|
| (ರೂ.4,500/-) | (ರೂ.800/-) | (ರೂ.4,700/-)<br>(ಕೇಂದ್ರ – ರೂ.3,200/- & ರಾಜ್ಯ – ರೂ.1,500/-) |

↓

**ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣಕ್ಕೆ**
**(ಒಟ್ಟು – ರೂ.10,000/-)**

ಮಿಷನ್ ನಿರ್ದೇಶಕರು,
ರಾ.ನೀ & ನೈ.ಮಿಷನ್ ಹಾಗೂ ಸರ್ಕಾರದ
ಪದನಿಮಿತ್ತ ಅಪರ ಕಾರ್ಯದರ್ಶಿಗಳು,
ಗ್ರಾ. ಅ ಮತ್ತು ಪಂಚಾಯತ್ ರಾಜ್ ಇಲಾಖೆ.